
# 'ಶ್ರೀರಾಮಕೃಷ್ಣ ವಚನವೇದ' ಭಾವಧಾರೆ - 9

ಸ್ವಾಮಿ ನಿತ್ಯಸ್ಥಾನಂದ



### ಶಕ್ತಿಯೇ ಜೀವನ

ಎರಡನೆಯ ಅಂಶ ಸತ್ವಹೀನತೆ – ನೆಂದ ಅವಲಕ್ಕಿಯಂತೆ. ಇದನ್ನು ಜನ ತಿಂದು ನುಂಗುತ್ತಾರೆ, ಹಾಗೆಯೇ ಸತ್ವಹೀನರನ್ನು ಸಮಾಜ ನುಂಗಿಹಾಕುತ್ತದೆ. ಸಂಸ್ಕೃತ ಸುಭಾಷಿತ ಶ್ಲೋಕ ವೊಂದಿದೆ:

**ಅಶ್ವಂ ನೈವ ಗಜಂ ನೈವ ವ್ಯಾಘ್ರಂ ನೈವ ಚ ನೈವ ಚ ।**
**ಅಜಾಪುತ್ರಂ ಬಲಿಂ ದದ್ಯಾತ್ ದೈವೋ ದುರ್ಬಲಘಾತಕಃ ॥**

'ಅಶ್ವವನ್ನಾಗಲಿ, ಆನೆಯನ್ನಾಗಲಿ, ದೇವತೆಗೆ ಬಲಿ ಕೊಡುವುದಿಲ್ಲ, ಹುಲಿಯನ್ನಂತೂ ಬಲಿಕೊಡುವುದೇ ಇಲ್ಲ. ಕುರಿಮರಿಯನ್ನೇ ಬಲಿಕೊಡುತ್ತಾರೆ. ದೈವವು ದುರ್ಬಲರನ್ನು ನಾಶಮಾಡುತ್ತದೆ.'

ಅದಕ್ಕಾಗಿಯೇ ಸ್ವಾಮಿ ವಿವೇಕಾನಂದರು ಹೇಳಿರುವುದು, 'ಶಕ್ತಿಯೇ ಜೀವನ ದೌರ್ಬಲ್ಯವೇ ಮರಣ' ಎಂದು. ಇನ್ನೊಂದು ದೃಷ್ಟಿಯಿಂದ ನೋಡಿದರೆ ದುರ್ಬಲರೇ ಚಿರವಾಗಿ ಉಳಿಯು ವರು. ಬಲಿಷ್ಠ ಪ್ರಾಣಿಗಳು, ಬಲಿಷ್ಠ ಜನಾಂಗಗಳೂ ಕೂಡ, ನಶಿಸಿಹೋಗುತ್ತಿರುವುದನ್ನು ನಾವು ನೋಡುತ್ತೇವೆ. ಕುರಿ ಆಡು ಮುಂತಾದವು ವೃದ್ಧಿಯಾಗುತ್ತಿವೆ. ಹಿಂಸಾತ್ಮಕ ಬಲ ವಿನಾಶಕಾರಿ ಎಂದು ನಾವು ಬಹುಶಃ ಹೇಳಬಹುದು. ಬಲಿಷ್ಠವೂ ಹಿಂಸಾ ತ್ಮಕವೂ ಆದ ಜನಾಂಗಗಳು ನಶಿಸಿಹೋಗಿರುವುದನ್ನು ನಾವು ಇತಿಹಾಸದಲ್ಲಿ ನೋಡುತ್ತೇವೆ. ಸಾಮಾನ್ಯವಾಗಿ ಹಿಂದೂಗಳು ಮೃದು ಸ್ವಭಾವದವರು (Mild Hindus) ಎಂದು ಹೇಳಲಾ ಗಿದೆ. ಎಷ್ಟೇ ಆಘಾತಕ್ಕೆ ಒಳಗಾಗಿದ್ದರೂ ಈ ಜನಾಂಗ ಅನೇಕ ಸಾವಿರ ವರ್ಷಗಳಿಂದ ಬದುಕಿಕೊಂಡು ಬಂದಿದೆ. ಮೃದು ಸ್ವಭಾವದಲ್ಲಿ ಒಂದು ಶಕ್ತಿಯಿದೆ. ಮೊಳಕೆ ಎಷ್ಟೇ ಮೃದುವಾ ದರೂ ಮಣ್ಣನ್ನು ಒಡೆದುಕೊಂಡು, ಕಲ್ಲನ್ನು ತಳ್ಳಿಕೊಂಡು ಮೇಲೆ ಬರುತ್ತದೆ. ಒಂದು ಸಂಸ್ಕೃತ ಶ್ಲೋಕ ಮೃದುತ್ವವೇ ಬಲಿಷ್ಠ ವೆಂದು ಸಾರುತ್ತದೆ:

**ಮೃದುನಾ ದಾರುಣಂ ಹಂತಿ ಮೃದುನಾ ಹಂತ್ಯದಾರುಣಮ್ ।**
**ನಾಸೇವ್ಯಂ ಮೃದುನಾ ಕಿಂಚಿತ್ ತಸ್ಮಾತ್ ತೀಕ್ಷ್ಣತರಂ ಮೃದುಃ॥**

''ಮೃದುವಾದುದು ದಾರುಣವಾದುದನ್ನೂ, ದಾರುಣ ವಲ್ಲದುದನ್ನೂ ಗೆಲ್ಲುತ್ತದೆ. ಅದಕ್ಕೆ ಅಸಾಧ್ಯವಾದುದು ಯಾವುದೂ ಇಲ್ಲ. ಆದ್ದರಿಂದ ಮೃದುವೇ ಅತ್ಯಂತ ತೀಕ್ಷ್ಣವಾದುದು.''

### ಶ್ರೀರಾಮಕೃಷ್ಣರ ಸುಂದರ ವ್ಯಕ್ತಿಚಿತ್ರ

ಶ್ರೀರಾಮಕೃಷ್ಣರು ಸಾಮಾನ್ಯವಾಗಿ ಕೇಳುವ ಒಂದು ಪ್ರಶ್ನೆ ಯನ್ನು 'ಮ'ಗೆ ಈಗ ಕೇಳುತ್ತಿದ್ದಾರೆ: ''ನಿನಗೊಂದು ಪ್ರಶ್ನೆ ಹಾಕಬೇಕೆಂದಿದ್ದೇನೆ. ನನ್ನ ಸಂಬಂಧವಾಗಿ ನಿನ್ನ ಅಭಿಪ್ರಾಯ ವೇನು?'' 'ಮ' ಸುಮ್ಮನೆ ನಿಂತುಕೊಂಡಿರುವುದನ್ನು ನೋಡಿ, ''ನಿನಗೇನನಿಸುತ್ತೆ ? ನನಗೆ ಎಷ್ಟಾಣೆ ಜ್ಞಾನವಿದೆ?'' ಎಂದು ಒತ್ತಾಯಿಸಿದರು. ಆಗ 'ಮ' ಹೇಳುತ್ತಾರೆ: ''ಆಣೆ ಎಂದು ಹೇಳಿ ದ್ದರಲ್ಲಿ, ಅದು ನನಗೆ ಅರ್ಥವಾಗುತ್ತಿಲ್ಲ. ಆದರೆ ಇದು ಮಾತ್ರ ಸತ್ಯ : ಈ ವಿಧದ ಜ್ಞಾನವನ್ನೇ ಆಗಲಿ, ವೈರಾಗ್ಯವನ್ನೇ ಆಗಲಿ, ಔದಾರ್ಯವನ್ನೇ ಆಗಲಿ ನಾನು ಎಂದೂ ಎಲ್ಲೂ ನೋಡಿರ ಲಿಲ್ಲ.'' ಕೆಲವೇ ದಿನಗಳ ಭೇಟಿಯಲ್ಲಿ 'ಮ' ಶ್ರೀರಾಮಕೃಷ್ಣ ರನ್ನು ಚೆನ್ನಾಗಿ ಅಳೆದುಬಿಟ್ಟಿದ್ದರು. ಇದು ಶ್ರೀರಾಮಕೃಷ್ಣರ ಬಗ್ಗೆ ಅವರು ವ್ಯಕ್ತಪಡಿಸಿದ ಒಂದು ವಿಶಿಷ್ಟವಾದ ಹೇಳಿಕೆ. ಎಲ್ಲ ಶ್ರೇಷ್ಠ ಗುಣಗಳೂ ಇಲ್ಲಿ ಸೇರಿಕೊಂಡಿವೆ. ಕೆಲವರು ಕೇವಲ ಜ್ಞಾನಿ

ಗಳಾಗಿರುತ್ತಾರೆ — ತೋತಾಪುರಿಯಂತೆ. ಇನ್ನು ಕೆಲವರು ಭೈರವಿ ಬ್ರಾಹ್ಮಣಿಯಂತೆ ಕೇವಲ ಭಕ್ತರಾಗಿರುತ್ತಾರೆ. ಕೆಲವರಲ್ಲಿ ಕೇವಲ ಶ್ರದ್ಧೆ ಇರುತ್ತದೆ — ಅವರು ಮತಾಂಧರಾಗಿರುತ್ತಾರೆ. ಮತ್ತೆ ಕೆಲವರಿಗೆ ಕೇವಲ ವೈರಾಗ್ಯವಿರುತ್ತದೆ, ಆದರೆ ಸಾಮಾಜಿಕ ಕಳಕಳಿ ಇರುವುದಿಲ್ಲ. ಇನ್ನೂ ಕೆಲವರು ಕೇವಲ ಉದಾರಿಗಳು, ಅವರಲ್ಲಿ ತೀವ್ರತೆ ಇರುವುದಿಲ್ಲ. ಶ್ರೀರಾಮಕೃಷ್ಣರು ಇವೆಲ್ಲ ಗುಣಗಳ ಸಮನ್ವಯ ಮೂರ್ತಿಯಾಗಿದ್ದರು. ಇದು 'ಮ' ವ್ಯಕ್ತಪಡಿಸಿದ ಶ್ರೀರಾಮಕೃಷ್ಣರ ಬಗೆಗಿನ ಅತ್ಯಂತ ಔಚಿತ್ಯಪೂರ್ಣವಾದ ಅಭಿಪ್ರಾಯ.

ಶ್ರೀರಾಮಕೃಷ್ಣರು 'ಮ' ರನ್ನು ''ನನ್ನ ಸಂಬಂಧವಾಗಿ ನಿನ್ನ ಅಭಿಪ್ರಾಯವೇನು?'' ಎಂದು ಕೇಳಿದುದರಲ್ಲಿಯೂ ಒಂದು ಔಚಿತ್ಯವಿದೆ. ತಮ್ಮ ಬಗ್ಗೆ ಶಿಷ್ಯರಲ್ಲಿ ಸರಿಯಾದ ಅಭಿಪ್ರಾಯ ವಿರಬೇಕು, ಅದು ಅವರ ಆಧ್ಯಾತ್ಮಿಕ ಪ್ರಗತಿಗೆ ಆವಶ್ಯಕ — ಎಂಬ ದೃಷ್ಟಿಯಿಂದ ಶ್ರೀರಾಮಕೃಷ್ಣರು ಆ ರೀತಿ ಕೇಳುತ್ತಿದ್ದರು. ಮುಂದೆಯೂ ಅನೇಕ ಬಾರಿ ಈ ರೀತಿಯ ಪ್ರಶ್ನೆಗೆ 'ಮ' ಬೇರೆ ಬೇರೆ ಉತ್ತರವನ್ನು ನೀಡಿದ್ದಾರೆ. ಈ ಉತ್ತರಗಳಲ್ಲಿ ಶ್ರೀರಾಮಕೃಷ್ಣರ ಬಗ್ಗೆ ಅವರ ದೃಷ್ಟಿ ಪ್ರಗತಿಪರವಾಗಿ ಬದಲಾಗುತ್ತಿರುವುದನ್ನು ಗುರುತಿಸಬಹುದು.

ಈ ಮಾತುಕತೆಯ ನಂತರ 'ಮ' ಪರಮಹಂಸರಿಗೆ ಪ್ರಣಾಮ ಮಾಡಿ ಅವರಿಂದ ಬೀಳ್ಕೊಂಡರು. ಹೆಬ್ಬಾಗಿಲವರೆಗೆ ಹೋಗಿ ಏನನ್ನೋ ನೆನಪಿಸಿಕೊಂಡು ಮತ್ತೆ ನಾಟ್ಯಮಂದಿರದಲ್ಲಿದ್ದ ಪರಮಹಂಸರ ಹತ್ತಿರ ಬಂದರು. ''ಪರಮಹಂಸರು ಆ ಕ್ಷೀಣ ಬೆಳಕಿನಲ್ಲಿ ಏಕಾಂಗಿಯಾಗಿ ತಿರುಗಾಡುತ್ತಿದ್ದಾರೆ. ಒಬ್ಬರೇ — ನಿಸ್ಸಂಗರಾಗಿ. ಮೃಗರಾಜ ಅರಣ್ಯ ಮಧ್ಯದಲ್ಲಿ ಸ್ವೇಚ್ಛೆಯಿಂದ ಏಕಾಕಿ ತಿರುಗಾಡುತ್ತಿರುವುದೋ ಏನೋ ಎಂಬ ಹಾಗೆ! ಆತ್ಮಾರಾಮರು; ಸಿಂಹಕ್ಕೆ ಒಂಟಿಯಾಗಿರಲು, ಒಂಟಿಯಾಗಿ ತಿರುಗಲು ಇಚ್ಛೆ! ಅನಪೇಕ್ಷರು!'' 'ಮ' ಆಶ್ಚರ್ಯಚಕಿತರಾಗಿ ಮತ್ತೆ ಆ ಮಹಾಪುರುಷರನ್ನು ನೋಡಲಾರಂಭಿಸಿದ. ಶ್ರೀರಾಮಕೃಷ್ಣರ ಬಗೆಗಿನ ಒಂದು ಅತ್ಯಂತ ಸುಂದರವಾದ, ಮನಮುಟ್ಟುವ, ಹೃದಯಕ್ಕೆ ತಾಕುವ ವಿವರಣೆ ಇದು. ಈ ವಿವರಣೆಯು ಭಗವದ್ಗೀತೆಯ ಈ ಕೆಳಗಿನ ಶ್ಲೋಕವನ್ನು ಮನಸ್ಸಿಗೆ ತಂದುಕೊಡುತ್ತದೆ:

**ಯೋಽಂತಃ ಸುಖೋಽಂತರಾರಾಮೋ ತಥಾಂತರ್ಜ್ಯೋತಿರೇವ ಯಃ ।**
**ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋಽಧಿಗಚ್ಛತಿ ॥**


*(ಗೀತಾ, ೫.೨೪)*

'ಯಾರು ಅಂತಃಸುಖಿಯೋ, ತನ್ನೊಳಗೇ ಆರಾಮವಾಗಿರುತ್ತಾನೊ, ಯಾರ ಅಂತರಂಗದಲ್ಲಿ ಯಾವಾಗಲೂ ಆತ್ಮಜ್ಯೋತಿ ಬೆಳಗುತ್ತಿರುತ್ತದೊ, ಬ್ರಹ್ಮವೇ ಆಗಿರುವ ಅಂತಹ ಯೋಗಿಯು ಬ್ರಹ್ಮನಿರ್ವಾಣವನ್ನು ಹೊಂದುತ್ತಾನೆ.' *'ವಿವೇಕಚೂಡಾಮಣಿ'*ಯ ಈ ಕೆಳಗಿನ ಶ್ಲೋಕವೂ ಈ ಸಂದರ್ಭಕ್ಕೆ ಉಚಿತವಾಗಿದೆ:

**ನಿರ್ಧನೋಽಪಿ ಸದಾ ತುಷ್ಟೋಽಪ್ಯಸಹಾಯೋ ಮಹಾಬಲಃ ।**
**ನಿತ್ಯತೃಪ್ತೋಽಪ್ಯಭುಂಜಾನೋಽಸಮಃ ಸಮದರ್ಶನಃ ॥** *(೫೪೩)*

'ಜೀವನ್ಮುಕ್ತನು ಕೈಯಲ್ಲಿ ಕಾಸಿಲ್ಲದಿದ್ದರೂ ಸದಾ ತೃಪ್ತನಾಗಿರುತ್ತಾನೆ, ಯಾವ ಸಹಾಯವಿಲ್ಲದಿದ್ದರೂ ಮಹಾ ಬಲಶಾಲಿಯಾಗಿರುತ್ತಾನೆ, ಏನನ್ನೂ ಭೋಗಿಸದಿದ್ದರೂ ನಿತ್ಯತೃಪ್ತನಾಗಿರುತ್ತಾನೆ ಹಾಗೂ ಅವನು ಯಾರಿಗೂ ಸಮನಲ್ಲದಿದ್ದರೂ ಸಮದರ್ಶಿಯಾಗಿರುತ್ತಾನೆ.' *(ಮುಂದುವರಿಯುವುದು)*

## ಯುವಚೇತನ



**ಆ**ತ್ಮ ಸಾಕ್ಷಾತ್ಕಾರ ಪ್ರಪಂಚಕ್ಕೇ ಕಲ್ಯಾಣಕಾರಿ. ಇದನ್ನು ಪಡೆದರೆ, ಪ್ರಪಂಚದಲ್ಲಿ ಇರುವುದೊಂದು ಆತ್ಮ ಎಂದು ಅರಿತರೆ, ತಮ್ಮ ಪ್ರೇಮ ಚಿಲುಮೆಯೆಲ್ಲ ಬತ್ತಿ ಹೋಗುವುದು, ಇಲ್ಲಿ ಮತ್ತು ಮುಂದೆ ತಾನು ಪ್ರೀತಿಸುವುದೆಲ್ಲ ಮಂಗಮಾಯವಾಗುವುದು ಎಂದು ಜನರು ಅಂಜುವರು. ತಮ್ಮ ವೈಯಕ್ತಿಕತೆಯನ್ನು ಕಡೆಗಣಿಸಿ ದವರೇ ಪ್ರಪಂಚದಲ್ಲಿ ಪ್ರಚಂಡ ಕರ್ಮ ಪಟುಗಳೆಂಬುದನ್ನು ಜನ ಅರಿಯರು. ತಾನು ಯಾವುದನ್ನು ಪ್ರೀತಿಸುತ್ತಾನೆಯೊ ಅದು ಕ್ಷುದ್ರ ಅಲ್ಲ ಮರ್ತ್ಯ ವಸ್ತುವಲ್ಲ ಎಂದು ಅರಿತಾಗ ಮಾತ್ರ ಮನುಷ್ಯನು ಅದನ್ನು ಪೂರ್ಣವಾಗಿ ಪ್ರೀತಿಸಬಲ್ಲ. ತಾನು ಪ್ರೀತಿಸುವ ವಸ್ತು ಬೊಗಸೆ ಮಣ್ಣಿನಿಂದಾದುದಲ್ಲ, ಅದು ಸಾಕ್ಷಾತ್ ಭಗವಂತ ಎಂದು ಅರಿತಾಗ ಮಾತ್ರ ಅವನು ನೈಜವಾಗಿ ಪೂರ್ಣವಾಗಿ ಪ್ರೀತಿಸಬಲ್ಲ. ಗಂಡನು ಸ್ವಯಂ ಭಗವಂತ ಎಂದು ಹೆಂಡತಿ ಅರಿತಾಗ ಅವಳು ಗಂಡನನ್ನು ಹೆಚ್ಚು ಪ್ರೀತಿಸಬಲ್ಲಳು. ಹೆಂಡತಿ ಸ್ವಯಂ ಭಗವಂತ ಎಂದು ಗಂಡ ಅರಿತಾಗ ಅವನು ಅವಳನ್ನು ಹೆಚ್ಚು ಪ್ರೀತಿಸಬಲ್ಲನು. ಮಕ್ಕಳನ್ನು ಭಗವಂತನೆಂದೇ ತಿಳಿದ ತಾಯಿ ತನ್ನ ಮಕ್ಕಳನ್ನು ಹೆಚ್ಚು ಪ್ರೀತಿಸುವಳು. ವೈರಿಯೂ ದೇವರೆ ಎಂದು ಯಾರು ಅರಿತಿರುವನೊ ಅವನು ತನ್ನ ಪರಮ ಶತ್ರುವನ್ನೂ ಪ್ರೀತಿಸುವನು. ಸಾಧು ದೇವರೆಂದು ಯಾರಿಗೆ ಗೊತ್ತಿದೆಯೊ ಅವನು ಸಾಧುವನ್ನು ಪ್ರೀತಿಸುವನು. ಅವನು ಅಸಾಧುವನ್ನೂ ಪ್ರೀತಿಸುವನು. ಅಸಾಧುವಿನ ಹಿನ್ನೆಲೆಯೂ ಕೂಡ ಸ್ವಯಂ ಭಗವಂತನೆ ಆಗಿರುವನು. ಯಾರಲ್ಲಿ ಕ್ಷುದ್ರ ಅಹಂಕಾರ ಮಾಯವಾಗಿದೆಯೊ ಅಲ್ಲಿ ದೇವರಿರುವನು.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೨, ಪು.೨೦೧)*